# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 2110 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 25-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದ ವಿವಿಧ ರೀತಿಯ ರಸ್ತೆಗಳಾದ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರೆ ಜಿಲ್ಲಾ ರಸ್ತೆ ಮುಂತಾದ ರಸ್ತೆಗಳ ಬದಿಯಲ್ಲಿ ಸುರಕ್ಷಿತ ವಲಯ ಘೋಷಣೆ ಮಾಡಿರುವುದೇ; ಇದ್ದಲ್ಲಿ ಅದರ ಮಾರ್ಗಸೂಚಿಗಳು ಹಾಗೂ ಜಾರಿಯ ವಿವರವೇನು; ಘೋಷಣೆ ಮಾಡದಿದ್ದರೆ ಅದಕ್ಕೆ ಕಾರಣವೇನು; | • ರಾಜ್ಯದ ವಿವಿಧ ರೀತಿಯ ರಸ್ತೆಗಳಾದ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿ ಸುರಕ್ಷಿತ ವಲಯ ಎಂದು ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಘೋಷಣೆ ಮಾಡಿರುವುದಿಲ್ಲ.<br>• ಹೆಚ್ಚು ಅಪಘಾತ ಆಗುವ ಸ್ಥಳಗಳನ್ನು ಬ್ಲಾಕ್ ಸ್ಪಾಟ್ (Black Spot) ಎಂದು ಗುರುತಿಸಿ ಅಂತಹ ಸ್ಥಳಗಳಲ್ಲಿ ಅಪಘಾತಗಳು ಆಗದಂತೆ/ ಅಪಘಾತಗಳನ್ನು ಕಡಿಮೆ ಮಾಡಲು ರಸ್ತೆ ಉಪಕರಣಗಳನ್ನು (Road Furniture's) ಮತ್ತು ಹೆಚ್ಚಿನ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಂಡು ವಾಹನ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |
| (ಆ) | ಲೋಕೋಪಯೋಗಿ ಇಲಾಖೆಯ ವಿವಿಧ ರಸ್ತೆಗಳ ಬದಿಯಲ್ಲಿ ಇರುವ ಅಪಾಯಕಾರಿ ಮರಗಳು, ಹಳೆಯ/ಅಪಾಯಕಾರಿ ಕಟ್ಟಡಗಳು, ವಿದ್ಯುತ್ ಕಂಬಗಳು, ಜಾಹೀರಾತು ಫಲಕಗಳು ಹಾಗೂ ಇತರೆ ಅಡ್ಡಿಪಡಿಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು; ಈ ಕಾರ್ಯಾಚರಣೆಗಾಗಿ ಯಾವ ಯಾವ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ; | ರಾಷ್ಟ್ರೀಯ ಹೆದ್ದಾರಿಗಳ ಬದಿಯಲ್ಲಿ ಇರುವ ಅಪಾಯಕಾರಿ ಮರಗಳು, ಹಳೆಯ/ಅಪಾಯಕಾರಿ ಕಟ್ಟಡಗಳು, ವಿದ್ಯುತ್ ಕಂಬಗಳು, ಜಾಹೀರಾತು ಫಲಕಗಳು ಹಾಗೂ ಇತರೆ ಅಡ್ಡಿಪಡಿಗಳನ್ನು ತೆರವುಗೊಳಿಸಲು STMC, PBMC ಯೋಜನೆಗಳಡಿಯಲ್ಲಿ ಹಾಗೂ ಕಾಮಗಾರಿಯ ದೋಷ ರಹಿತ ನಿರ್ವಹಣಾ ಅವಧಿ (DLP) ಯಲ್ಲಿ ಮೂಲ ಗುತ್ತಿಗೆದಾರರಿಂದ ನಿರ್ವಹಿಸಲಾಗುತ್ತಿದ್ದು, ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.<br><br>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಬದಿಯಲ್ಲಿರುವ ಅಪಾಯಕಾರಿ ಮರಗಳು ಹಳೆಯ/ ಅಪಾಯಕಾರಿ ಕಟ್ಟಡಗಳು ವಿದ್ಯುತ್ ಕಂಬಗಳು, ಜಾಹೀರಾತು ಫಲಕಗಳು ಕಂಡು ಬಂದಲ್ಲಿ ನಿಯಮಾನುಸಾರ ಅರಣ್ಯ ಇಲಾಖೆ, ವಿದ್ಯುತ್ ಇಲಾಖೆ, ಸ್ಥಳೀಯ ಸಂಸ್ಥೆ ಮತ್ತು ಪೋಲಿಸ್ ಇಲಾಖೆ ಸಮನ್ವಯದೊಂದಿಗೆ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ಅಪಾಯಕಾರಿ ಮರಗಳು, ಕಟ್ಟಡಗಳು, ವಿದ್ಯುತ್ ಕಂಬಗಳು ಇತ್ಯಾದಿಗಳನ್ನು ತೆರವುಗೊಳಿಸುವ ವೆಚ್ಚವನ್ನು ಯಾರು ಭರಿಸುತ್ತಾರೆ; (PWD/ ವಿದ್ಯುತ್ ಇಲಾಖೆ/ಸ್ಥಳೀಯ ಸಂಸ್ಥೆ/ಖಾಸಗಿ ಜಾಗದ ಮಾಲೀಕರು;). ಈ | ರಾಷ್ಟ್ರೀಯ ಹೆದ್ದಾರಿಗಳ ಬದಿಯಲ್ಲಿನ ಅಪಾಯಕಾರಿ ಮರಗಳು, ವಿದ್ಯುತ್ ಕಂಬಗಳು ಇತ್ಯಾದಿಗಳನ್ನು ತೆರವುಗೊಳಿಸುವ ವೆಚ್ಚವನ್ನು ಸಕ್ಷಮ ಪ್ರಾಧಿಕಾರದಿಂದ ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಿ, ಅನುಮತಿ ದೊರೆತ ನಂತರವೇ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ<br><br>ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ರಸ್ತೆ ಅಗಲೀಕರಣ/ಅಭಿವೃದ್ಧಿ ಕಾಮಗಾರಿಗಳನ್ನು ಇಲಾಖಾ ವತಿಯಿಂದ ಕೈಗೊಳ್ಳುವ ಸಂದರ್ಭದಲ್ಲಿ ಕಾಮಗಾರಿಯ ಮೂಲ ಅಂದಾಜಿನಲ್ಲಿ |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td>ಕುರಿತು ಸರ್ಕಾರದ ನಿಯಮಗಳು ಮತ್ತು ಮಾರ್ಗಸೂಚಿಗಳೇನು;</td><td>ಅಪಾಯಕಾರಿ ಮರಗಳು/ವಿದ್ಯುತ್ ಕಂಬಗಳು, ಇತ್ಯಾದಿಗಳನ್ನು ತೆರವುಗೊಳಿಸಲು ತಗಲುವ ಮೊತ್ತವನ್ನು ಭರಿಸಲು ಅವಕಾಶ ಕಲ್ಪಿಸಿ ಇಲಾಖೆಯಿಂದಲೇ ವೆಚ್ಚ ಭರಿಸಲಾಗುತ್ತದೆ.</td></tr>
<tr><td>(ಈ)</td><td>ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರಸ್ತೆ ಬದಿಯ ಮರಗಳು ಹಾಗೂ ಇತರ ಅಪಾಯಕಾರಿ ಪರಿಸ್ಥಿತಿಗಳನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳ ವಿವರವೇನು;</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇರುವ ರಸ್ತೆ ಬದಿಯ ಮರಗಳು ಹಾಗೂ ಇತರೆ ಅಪಾಯಕಾರಿ ಪರಿಸ್ಥಿತಿಗಳನ್ನು ನಿವಾರಿಸಲು STMC, PBMC ಯೋಜನೆಯಡಿಯಲ್ಲಿ ಹಾಗೂ ಕಾಮಗಾರಿಯ ದೋಷ ರಹಿತ ನಿರ್ವಹಣಾ ಅವಧಿಯಲ್ಲಿ (DLP) ಮೂಲ ಗುತ್ತಿಗೆದಾರರಿಂದ ನಿರ್ವಹಿಸಲಾಗುತ್ತಿದ್ದು, ಅಪಾಯಕಾರಿ ಮರಗಳನ್ನು ಮತ್ತು ಇತರೆ ಅಪಾಯಕಾರಿ ಪರಿಸ್ಥಿತಿಗಳನ್ನು ಸಂಬಂಧಪಟ್ಟ ಇಲಾಖೆಗೆ ವರದಿ ಮಾಡಿ, ಆಯಾ ಇಲಾಖೆಗಳ ವತಿಯಿಂದ ಕ್ರಮ ತೆಗೆದುಕೊಳ್ಳಲಾಗಿರುತ್ತದೆ ಹಾಗೂ ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.<br><br>ಪ್ರತಿ ವರ್ಷದಂತೆ ರಸ್ತೆ ಬದಿಯ ಮರಗಳು ಹಾಗೂ ಇತರ ಅಪಾಯಕಾರಿ ಪರಿಸ್ಥಿತಿಗಳನ್ನು ನಿವಾರಿಸಲು ಜಿಲ್ಲಾಡಳಿತ ಮತ್ತು ಆಯಾ ಇಲಾಖೆಯವರಿಂದ ಸಮನ್ವಯವನ್ನು ಸಾಧಿಸಿ ತುರ್ತು ಪರಿಸ್ಥಿತಿಗಳನ್ನು ಕಳೆದ ಮೂರು ವರ್ಷಗಳಲ್ಲಿ ನಿಭಾಯಿಸಲಾಗಿದೆ.<br><br>ಅಪಾಯಕಾರಿ ಮರಗಳನ್ನು ಮಳೆಗಾಲ ಪೂರ್ವದಲ್ಲಿ ಗುರುತಿಸಿ ತೆರವುಗೊಳಿಸುವುದು, ಅರಣ್ಯ ಇಲಾಖೆಯಿಂದ ಕ್ರಮವಹಿಸಲಾಗಿರುತ್ತದೆ.<br><br>ಮಳೆಗಾಲ ಪೂರ್ವದಲ್ಲೇ ಮೋರಿ/ ಚರಂಡಿಗಳ ಹೂಳು ತೆಗೆದು ಮಳೆ ನೀರು ಸರಾಗವಾಗಿ ಹರಿದು ಹೋಗಲು ಕ್ರಮವಹಿಸುವುದು, ಮಳೆಗಾಲದಲ್ಲಿ ನೀರು ನಿಂತ ಸ್ಥಳಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ತುರ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಜಿಲ್ಲಾಡಳಿತದಿಂದ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ರಚಿಸಲಾಗುವ ಎಲ್ಲಾ ಇಲಾಖೆಗಳ ನ್ನೊಳಗೊಂಡ TASK FORCE ವತಿಯಿಂದ ಅಪಾಯಕಾರಿ ಪರಿಸ್ಥಿತಿಗಳನ್ನು ಕನಿಷ್ಠ ಸಮಯದಲ್ಲಿ ನಿಭಾಯಿಸಲು ಸಹಕಾರಿಯಾಗಿರುತ್ತದೆ.</td></tr>
<tr><td>(ಉ)</td><td>ರಸ್ತೆ ಸುರಕ್ಷತಾ ಕ್ರಮಗಳಿಗೆ ವಾರ್ಷಿಕವಾಗಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ; ಅದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊತ್ತ ವೆಚ್ಚವಾಗಿದೆ; ಅವುಗಳ ವಿವರವೇನು?</td><td>ಲೋಕೋಪಯೋಗಿ ಇಲಾಖೆಯ PRAMC ಅಡಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ರಸ್ತೆ ಸುರಕ್ಷತಾ ಕ್ರಮಗಳಿಗೆ ನಿಗಧಿಪಡಿಸಿರುವ ಮೊತ್ತ ಹಾಗೂ ವೆಚ್ಚಗಳ ವಿವರಗಳು ಈ ಕೆಳಕಂಡಂತಿವೆ.<br><br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಆರ್ಥಿಕ ವರ್ಷ</th><th>ಲೆಕ್ಕಶೀರ್ಷಿಕೆ</th><th>ನಿಗದಿ ಪಡಿಸಿದ ಅನುದಾನ</th><th>ಬಿಡುಗಡೆ ಗೊಳಿಸಿದ ಅನುದಾನ</th><th>ವೆಚ್ಚವಾಗಿರುವ ಮೊತ್ತ</th></tr>
<tr><td>1</td><td>2022-23</td><td>3054-03-337-0-07-200-State Highway - Road Safety Works</td><td>7500.00</td><td>7500.00</td><td>7499.97</td></tr>
</table></td></tr>
</table>

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|

| | | | | | |
|---|---|---|---|---|---|
| | | Maintenance Expenditure | | | |
| | | 3054-04-337-1-13-200-District and Other Roads - Road Safety Works Maintenance Expenditure | 6000.00 | 6000.00 | 5999.97 |
| | | 5054-05-337-4-02-154- Road Safety Works and Barricading along the Nalas Improvements | 6000.00 | 6000.00 | 5999.94 |
| 2 | 2023-24 | 3054–03–337–0–09–200 Grants from Karnataka Road Safety Fund-Maintenance Expenditure | 22500.00 | 22500.00 | 22499.96 |
| 3 | 2024-25 | 3054–03–337–0–09–200 Grants from Karnataka Road Safety Fund-Maintenance Expenditure | 47500.00 | 47500.00 | 47499.94 |

ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯ ಬೆಂಗಳೂರು ವ್ಯಾಪ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಮೂಲ ಕಾಮಗಾರಿಗಳಲ್ಲಿ 4 ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಂಡಿದ್ದು, ಸದರಿ ಕಾಮಗಾರಿಗಳಿಗೆ ಭರಿಸಲಾಗಿರುವ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

(ಅ) ರಾಷ್ಟ್ರೀಯ ಹೆದ್ದಾರಿ ಕಲಬುರಗಿ ವಿಭಾಗಕ್ಕೆ 2022–23 ರಲ್ಲಿ ರಸ್ತೆ ಸುರಕ್ಷತಾ ಕ್ರಮಗಳಿಗೆ Providing road safety works and installation of sign boards etc lime stones Quarry area situated on NH-150 (Kalaburgi wadi-Yadgiri section) from km 28.600 to Km 30.800 of Karnataka state (Job no.150-KNT-2022-23-967) ಕಾಮಗಾರಿಯು ರೂ.1.15 ಕೋಟಿಗಳಿಗೆ 2022–23ನೇ ಸಾಲಿನಲ್ಲಿ ಮಂಜೂರಾಗಿದ್ದು, 2024–25 ರಲ್ಲಿ ಸದರಿ ಕಾಮಗಾರಿಗೆ ರೂ.0.78 ಕೋಟಿ ವೆಚ್ಚ ಮಾಡಲಾಗಿದೆ.

(ಆ) ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯದ ಬೆಳಗಾವಿ ವಿಭಾಗಕ್ಕೆ ರಸ್ತೆ ಸುರಕ್ಷತಾ ಕ್ರಮಗಳಿಗೆ ವಾರ್ಷಿಕವಾಗಿ ಕೆಳಕಂಡ ಕಾಮಗಾರಿಗಳು ರೂ.15.88 ಕೋಟಿಗಳಿಗೆ ಮಂಜೂರಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಸದರಿ ಕಾಮಗಾರಿಗಳಿಗೆ ರೂ.3.53 ಕೋಟಿ ವೆಚ್ಚ

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಮಾಡಲಾಗಿದೆ.<br>1. Slope protection works on at Km.45.65 & Road safety marking from Km.22.50 to Km. 70.90 of NH-69 in the State of Karnataka under road safety Annual Plan 2021-22<br>2. Long term rectification to the Black spot at 1) KA-02-369 Tambur cross of NH-52 (Old NH-63) from Km.19.00, 2) KA-02-276 Mastikatta Yellapur Road of NH-52 (Old NH-63) at Km.99.00 of Karwar pertaining to N.H.Division Belagavi in Karnataka under Blackspot rectification for the year 21-22.<br>3. Curve Improvement at Km.41.500 on NH-69 (Black Spot IB:KA:(05)-37) and Construction of RCC Culvert at Km.35.600 on NH-69 Honnavar Sagar Section in the state of Karnataka on EPC Mode in the state of Karnata under Road Safety Annual Plan 2024-25 |

ಸಂಖ್ಯೆ: ಲೋಇ 206 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ-

## Annexure
## LAQ No.2110
## Road Safety Works under taken by NH Bangalore zone from 2022-23 to 2024-25

| Sl.No | Name of the work | sanctioned Amount in Cr | Project cost in Cr | Expenditure Amount in Cr | Present Status of the work |
|---|---|---|---|---|---|
| 1 | Providing road Safety measures and curve improvements from Km 53.775 to 55.060 at Bharatipura near Thirthahalli of NH-169 (Shimoga - Mangalore setcion) in the state of Karnataka on EPC Mode (Job No:NH-169-KNT-2021-22-955) | 56.56 | 43.36 | 43.36 | Work completed |
| 2 | "Remedial Measures and Improvement of (Black spot ID KA 03-110) at Mayagondanahalli Village of chainage Km 166.675 to Km 167.175 NH-73 (old NH 234) Mangalore-Tumkur section in the state of Karnataka under road safety Annual Plan 2023-24 (Job No.NH-73 (Old NH-234)/KA/Mangaluru/2023-24/RSEC-02)". | 2.09 | 1.45 | 0 | Work under progress |
| 3 | Improvements to Blackspot at Kalbetta junction(KA-(02)-422) on NH-275, Bantwala-Bengaluru section in the state of Karnataka | 4.04 | 2.57 | 1.24 | Work under progress |
| 4 | Improvements to Blackspot at Devalapura junction (KA-(05)-19) on NH-275K, Mysore Ring road section in the state of Karnataka | 34.66 | 20.8 | 1.04 | Work under progress |
| | Total | 97.35 | 68.18 | 45.64 | |